ಬಂದುಬಿಡುತ್ತದೆ. ಅದೊಂದು ಬಗೆಯಲ್ಲಿ ಸಹಜ ಹೆರಿಗೆ ಇದ್ದ ಹಾಗೆ. ಇನ್ನು ಕೆಲವು ಸಲ ನಾವೇ ಸಿದ್ಧತೆ ಮಾಡಿಕೊಂಡು ಪ್ರಯತ್ನಪೂರ್ವಕವಾಗಿ ಕಟ್ಟಬೇಕಾಗುತ್ತದೆ. ಅದನ್ನು ಸಿಜೇರಿಯನ್ ಹೆರಿಗೆ ಅನ್ನಬಹುದು!

ಕೆಲವು ಸಲ ಎಲ್ಲಿಯೋ ಹೋಗುತ್ತಿರುವಾಗ, ಡ್ರೈವ್ ಮಾಡ್ತಿರುವಾಗ ತಂತಾನೆಯೇ ಟ್ಯೂನ್ ಹುಟ್ಟುತ್ತದೆ. ಇನ್ನು ಕೆಲವು ಸಲ ನನಗೆ ಇಂಥದ್ದೇ ಟ್ಯೂನ್ ಬೇಕು ಎಂದು ಹೇಳಿರುತ್ತಾರೆ. ಆ ಕಥೆ, ಸನ್ನಿವೇಶದ ಅಗತ್ಯಕ್ಕೆ ಏನಿದೆ? ಪಾಸಿಟಿವ್ ಬೇಕಾ, ನೆಗೆಟಿವ್ ಬೇಕಾ (ಮೇಜರ್ ಸ್ಕೇಲ್ – ಮೈನರ್ ಸ್ಕೇಲ್ ಎಂದು ಸಂಗೀತದ ಪರಿಭಾಷೆಯಲ್ಲಿ ಹೇಳುತ್ತೇವೆ) ಎಂದು ಯೋಚಿಸಿ, ಯಾವ ರಾಗ, ಸ್ಕೇಲ್ ಹೊಂದುತ್ತದೆ ಎಂದು ಯೋಚಿಸಿ ಕೀಬೋರ್ಡ್ ಎದುರು ಕೂತು ಪ್ರಯತ್ನಪೂರ್ವಕವಾಗಿ ಕಂಪೋಸ್ ಮಾಡ್ತೀನಿ. ಇನ್ನು ಕೆಲವು ಸಲ ಸನ್ನಿವೇಶಗಳಿಗೆ ಹೊಂದುವಂಥ ಸಾಹಿತ್ಯ ಸಿದ್ಧವಾಗಿರುತ್ತದೆ. ಅದನ್ನು ಇಟ್ಟುಕೊಂಡು ಸಂಗೀತ ಸಂಯೋಜನೆ ಮಾಡಿದ್ದೂ ಇದೆ. ಒಂದು ಸನ್ನಿವೇಶವನ್ನು ಕೇಳಿದ ತಕ್ಷಣ ತುಂಬ ಇಂಪ್ರೆಸ್ ಆಗಿ ಅಲ್ಲಿಯೇ ಒಂದು ಟ್ಯೂನ್ ಮತ್ತು ಪದ ಒಟ್ಟೊಟ್ಟಿಗೇ ಹುಟ್ಟುತ್ತದೆ. ಆವಾಗ ಪದಗಳು ಮತ್ತು ರಾಗ ಜೊತೆಗೇ ಪೋಣಿಸಿಕೊಳ್ಳುತ್ತಾ ಹೋಗುತ್ತವೆ. ರಾತ್ರಿ ನಿದ್ದೆ ಮಾಡುವಾಗ ಚಕ್ಕನೆ ಟ್ಯೂನ್ ಹೊಳೆದಿದ್ದೂ ಇದೆ. ಆಗೆಲ್ಲ ಎದ್ದುಕೂತು ಮೊಬೈಲ್‌ನಲ್ಲಿ ರೆಕಾರ್ಡ್ ಮಾಡಿದ್ದಿದೆ.

ಟ್ಯೂನ್ ಕಂಪೋಸ್ ಮಾಡಿ ಅದಕ್ಕೆ ಸಾಹಿತ್ಯ ಬರೆಯುವ ಹಾಗೆಯೇ ಸಿದ್ಧವಾಗಿರುವ ಸಾಹಿತ್ಯಕ್ಕೆ ಕಂಪೋಸ್ ಮಾಡಿದ ಉದಾಹರಣೆಗಳೂ ಸಾಕಷ್ಟಿವೆ. ಒಂದು ಸಾಹಿತ್ಯ ಸಿದ್ಧವಿದ್ದರೆ ಅದಕ್ಕೆ ಟ್ಯೂನ್ ಮಾಡುವುದು ಸುಲಭ. ಆ ಸಾಹಿತ್ಯದಲ್ಲಿ ಅದರ ಭಾವ ಸ್ಪಷ್ಟವಾಗಿ ವ್ಯಕ್ತವಾಗಿಬಿಟ್ಟಿರುತ್ತದೆ. ಆ ಭಾವದ ದಾರಿಯಲ್ಲಿಯೇ ಟ್ಯೂನ್ ಕಂಪೋಸ್ ಮಾಡಬಹುದು. ಅಲ್ಲಿ ಒಂದು ಸವಾಲೂ ಇದೆ. ಕವಿ ಕಂಪೋಸರ್‌ನನ್ನು ಮನಸ್ಸಿನಲ್ಲಿಟ್ಟುಕೊಂಡು ಪದ್ಯ ಬರೆದಿರುವುದಿಲ್ಲ. ಸಂಗೀತ ಸಂಯೋಜನೆ ಐಡಿಯಾ ಅವರಲ್ಲಿ ಇರುವುದಿಲ್ಲ. ಬರಹಗಾರನಿಗೆ ಅವನದೇ ಒಂದು ಲಯ ಇರುತ್ತದೆ. ಅದರಲ್ಲಿಯೇ ಅವನು ಬರೆಯುತ್ತ ಹೋಗುತ್ತಾನೆ. ನಾವು ಆ ಲಯದ ಮಿತಿಯಲ್ಲಿಯೇ ಸಂಗೀತ ಸಂಯೋಜಿಸುತ್ತ ಹೋಗಬೇಕಾಗುತ್ತದೆ. ಇದರಿಂದ ಏಕತಾನತೆಯ ಅಪಾಯವೂ ಇದೆ. ಹೀಗೆ ಹಾಡು ಕಟ್ಟುವುದಕ್ಕೆ ಒಂದೇ ದಾರಿ ಇಲ್ಲ. ಎಲ್ಲ ರೀತಿಯ ದಾರಿಗಳಲ್ಲಿಯೂ ಹೋಗುವ ಸ್ವಾತಂತ್ರ್ಯ ಇರುವುದರಿಂದಲೇ ಇಷ್ಟೊಂದು ಬಗೆಬಗೆಯ ಸಿನಿಮಾ ಹಾಡುಗಳು ಬರುತ್ತಿವೆ.

ಒಂದು ಸಿನಿಮಾದಲ್ಲಿ ಮಾತ್ರವಲ್ಲ, ಇಡೀ ಸಂಗೀತ ಸಂಯೋಜನೆಯ ಕರಿಯರ್‌ನಲ್ಲಿಯೇ ಏಕತಾನತೆಯಲ್ಲಿ ಸಿಕ್ಕಿಕೊಳ್ಳುವ ಅಪಾಯವೂ ಇರುತ್ತದೆ. ಇದು ಎಲ್ಲ ಕಲೆಗಳಿಗೂ ಸೃಜನಶೀಲರಿಗೂ ಎದುರಾಗುವ ಅಪಾಯ. ಸಂಗೀತ ನಿರ್ದೇಶಕರಿಗೆ ಇಲ್ಲೊಂದು ಅಡ್ವಂಟೇಜ್ ಇದೆ. ಯಾಕೆಂದರೆ ನಾವು ಪ್ರತಿ ಸಲವೂ ಬೇರೆ ಬೇರೆ ನಿರ್ದೇಶಕರೊಂದಿಗೆ ಕೆಲಸ ಮಾಡುತ್ತೇವೆ. ಒಬ್ಬರೇ ನಿರ್ದೇಶಕರ ಬೇರೆ ಸಿನಿಮಾಗಳಿಗೆ, ಬೇರೆ ಕತೆಗೆ ಕೆಲಸ ಮಾಡುತ್ತೇವೆ. ಪ್ರತಿ ನಿರ್ದೇಶಕನೂ ನಮ್ಮ ಮಾಮೂಲಿ ಜಾಡಿಗಿಂತ ಬೇರೆ ರೀತಿಯ ಕೆಲಸವನ್ನು ನಿರೀಕ್ಷೆ ಮಾಡುತ್ತಿರುತ್ತಾನೆ. ನಿರ್ದೇಶಕ–ಸಾಹಿತಿ–ಕತೆಗಳು ಈ ಮೂರೂ ಪ್ರತಿಸಲ ಸಂಗೀತ ನಿರ್ದೇಶಕನ ಏಕತಾನತೆಯನ್ನು ಬ್ರೇಕ್ ಮಾಡಲಿಕ್ಕೆ ಬಯಸುತ್ತಿರುತ್ತವೆ. ಹೊಸದಾಗಿ ಏನೋ ಮಾಡಬೇಕು ಎಂದು ಒತ್ತಾಯ ಮಾಡುತ್ತವೆ. ಇದರ ಜೊತೆಗೇ ನಮ್ಮಿಂದ ಬೇರೆ ಏನೋ ಹೊಸದನ್ನು ನಿರೀಕ್ಷಿಸುತ್ತಿದ್ದಾರೆ; ಅವರ ದೃಷ್ಟಿಕೋನದಿಂದ ಯೋಚಿಸೋಣ ಎಂಬ ಮುಕ್ತಮನಃಸ್ಥಿತಿ ಸಂಗೀತ ಸಂಯೋಜಕನಿಗೂ ಇರಬೇಕಾಗುತ್ತದೆ. ಇಲ್ಲದಿದ್ದರೆ ಒಂದೇ ಜಾಡಿಗೆ ಸಿಕ್ಕುಬೀಳುತ್ತೇವೆ. ಹೀಗೆ ನಾನು ಏಕತಾನತೆಯ ಜಾಡು ಹಿಡಿಯುತ್ತಿದ್ದೇನೆ, ಖಾಲಿಯಾಗುತ್ತಿದ್ದೇನೆ ಅನಿಸಿದಾಗಲೆಲ್ಲ ನಾನು ನಾಟಕಗಳನ್ನು ನೋಡುತ್ತೇನೆ. ನಾಟಕಗಳನ್ನು ನೋಡಿದಾಗೆಲ್ಲ ನನಗೆ ಹೊಸ ಹೊಸ ಐಡಿಯಾಗಳು ಹುಟ್ಟುತ್ತವೆ.